ನಿಯಮ - 72
ಕ್ರಮಸಂಖ್ಯೆ - 167

**ಕರ್ನಾಟಕ ಸರ್ಕಾರ**

ಸಂಖ್ಯೆ: ಎಂಇಡಿ 207 ಕೆಯುಎಂ 2021

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 23/11/2021

**ಇವರಿಂದ**
ಸರ್ಕಾರದ ಕಾರ್ಯದರ್ಶಿ,
ವೈದ್ಯಕೀಯ ಶಿಕ್ಷಣ ಇಲಾಖೆ

**ಇವರಿಗೆ:**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್,
ವಿಧಾನ ಸೌಧ,

**ಮಾನ್ಯರೆ,**

**ವಿಷಯ** : ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

**ಉಲ್ಲೇಖ** : ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ಪತ್ರ ಸಂಖ್ಯೆ: ಕವಿಪ/ಪ್ರಶಾ/167/144ನೇಅ/ನಿ-72/2021, ದಿ: 21.09.2021 ಮತ್ತು ಪತ್ರ ಸಂಖ್ಯೆ: ಕವಿಪ:ಪ್ರಶಾ;144ನೇಅ:112ಇಉಕೋ:2021, ದಿ: 28.10.2021

*****

ಪ್ರಸ್ತಾವಿತ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಉತ್ತರಗಳ 05 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

M. Jyothiprakash 23-11-2021
(ಎಂ. ಜ್ಯೋತಿಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ವೈದ್ಯಕೀಯ ಶಿಕ್ಷಣ ಇಲಾಖೆ

BV
23/11

ನಿಯಮ - 72
ಕ್ರಮಸಂಖ್ಯೆ - 167



**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅರವಿಂದ ಕುಮಾರ್ ಅರಳಿ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:**

**ವಿಷಯ:** ಕರ್ನಾಟಕ ರಾಜ್ಯದ ಪ್ರಮುಖ ಸಂಸ್ಥೆಯಾದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿಗಳಿಗೆ ಕಳೆದ ಎರಡು ವರ್ಷಗಳಿಂದ ಪದೋನ್ನತಿ ನೀಡದೆ ಇರುವುದರಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ

****

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಸಂಸ್ಥೆಯಲ್ಲಿ 02 ವರ್ಷಗಳಿಂದ ಗ್ರೂಪ್-ಎ, ಗ್ರೂಪ್-ಬಿ ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರುಗಳಿಗೆ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯ ಶಿಫಾರಸ್ಸಿನಂತೆ ಈ ಕೆಳಕಂಡ ಅಧಿಕಾರಿ ನೌಕರರುಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ.

ಸಂಸ್ಥೆಯಲ್ಲಿ ಖಾಲಿ ಇರುವ ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ ವೃಂದದ ಹುದ್ದೆಗಳಿಗೆ ದಿನಾಂಕ: 21.12.2019ರಂದು ಜರುಗಿದ ಮುಂಬಡ್ತಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಈ ಕೆಳಕಂಡ ಬೋಧಕ ವೃಂದದ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ.

| ಕ್ರಮ ಸಂಖ್ಯೆ | ಸದರಿ ಅಧಿಕಾರಿ /ನೌಕರರುಗಳು ಪ್ರಸ್ತುತ ಹೊಂದಿರುವ ಹುದ್ದೆಗಳು | ಮುಂಬಡ್ತಿ ಹೊಂದಿದ ಹುದ್ದೆಗಳು | ಮುಂಬಡ್ತಿ ಹೊಂದಿರುವ ಅಧಿಕಾರಿ / ನೌಕರರುಗಳ ಸಂಖ್ಯೆ |
|---|---|---|---|
| 01. | ಸಹ ಪ್ರಾಧ್ಯಾಪಕ | ಪ್ರಾಧ್ಯಾಪಕ | 01 |
| 02. | ಸಹಾಯಕ ಪ್ರಾಧ್ಯಾಪಕ | ಸಹ ಪ್ರಾಧ್ಯಾಪಕ | 05 |

ದಿನಾಂಕ: 16.06.2021ರ ಆದೇಶ ಸಂಖ್ಯೆ ಎಂಇಡಿ 37 ಕೆಯುಎಂ 2020ರ ಸರ್ಕಾರದ ಆದೇಶದಂತೆ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಹಾಗೂ ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ಕಲ್ಬುರ್ಗಿಯಲ್ಲಿನ ಗ್ರೂಪ್- ಬಿ ಮತ್ತು ಗ್ರೂಪ್-ಸಿ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳಿಗೆ ಯಾವುದೇ ಮುಂಬಡ್ತಿ ಇಲ್ಲದೇ ಒಂದೇ ಹುದ್ದೆಯಲ್ಲಿ 20 ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿರುವ ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ದಿನಾಂಕ: 03.07.2021ರಂದು ಈ ಕೆಳಕಂಡ ವೃಂದಗಳಿಂದ ಉನ್ನತೀಕರಣ ನೀಡಲಾಗಿರುತ್ತದೆ.

| ಕ್ರಮ ಸಂಖ್ಯೆ | ಪ್ರಸ್ತುತ ಹೊಂದಿದ ಹುದ್ದೆ ಗಳು | ಉನ್ನತ್ತೀಕರಣ ಹೊಂದಿದ ಹುದ್ದೆಗಳು | ಉನ್ನತ್ತೀಕರಣ ಹೊಂದಿರುವ ಅಧಿಕಾರಿ / ನೌಕರರುಗಳ ಸಂಖ್ಯೆ |
|---|---|---|---|
| 01. | ಸಹಾಯಕ ಸಮಾಜ ಕಲ್ಯಾಣ ಅಧಿಕಾರಿ | ಸಮಾಜ ಕಲ್ಯಾಣ ಅಧಿಕಾರಿ | 10 ಅಧಿಕಾರಿಗಳು |
| 02. | ಶುಶ್ರೂಷಕ | ಹಿರಿಯ ಶುಶ್ರೂಷಕ | 64 ನೌಕರರು |

| | | | |
|---|---|---|---|
| 03. | ಓ.ಟಿ. ಟೆಕ್ನಿಷಿಯನ್ | ಹಿರಿಯ ಓ.ಟಿ. ಟೆಕ್ನಿಷಿಯನ್ | 02 ನೌಕರರು |
| 04 | ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿಸ್ಟ್ | ಸೀನಿಯರ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿಸ್ಟ್ | 04 ನೌಕರರು |
| 05 | ದ್ವಿತೀಯ ದರ್ಜೆ ಸಹಾಯಕ/ ಕ್ಲರ್ಕ್ ಕಂ ಟೈಪಿಸ್ಟ್/ ಸ್ಟೋರ್ ಕ್ಲರ್ಕ್ ಕಂ ಟೈಪಿಸ್ಟ್ / ಕಿಚನ್ ಸೂಪರ್‌ವೈಸರ್ | ಪ್ರಥಮ ದರ್ಜೆ ಸಹಾಯಕ ಹುದ್ದೆ | 11 ನೌಕರರು |
| 06 | ಕಿರಿಯ ಪ್ರಯೋಗಶಾಲಾ ತಂತ್ರಜ್ಞ | ಹಿರಿಯ ಪ್ರಯೋಗಶಾಲಾ ತಂತ್ರಜ್ಞ | 03 ನೌಕರರು |
| 07 | ರೇಡಿಯೋಥೆರಪಿ ಟೆಕ್ನಾಲಜಿಸ್ಟ್ | ಸೀನಿಯರ್ ರೇಡಿಯೋಥೆರಪಿ ಟೆಕ್ನಾಲಜಿಸ್ಟ್ | 01 ನೌಕರರು |

ದಿನಾಂಕ: 06.07.2021ರಂದು ಜರುಗಿದ ಮುಂಬಡ್ತಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಮತ್ತು ಪೆರಿಫೆರಲ್ ಕ್ಯಾನ್ಸರ್ ಕೇಂದ್ರ, ಕಲ್ಬುರ್ಗಿಯಲ್ಲಿ ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ.

| ಕ್ರಮ ಸಂಖ್ಯೆ | ಸದರಿ ನೌಕರರುಗಳು ಪ್ರಸ್ತುತ ಹೊಂದಿರುವ ಹುದ್ದೆಗಳು | ಮುಂಬಡ್ತಿ ಹೊಂದಿದ ಹುದ್ದೆಗಳು | ಮುಂಬಡ್ತಿ ಹೊಂದಿರುವ ನೌಕರರುಗಳ ಸಂಖ್ಯೆ |
|---|---|---|---|
| 01. | ಪ್ರಥಮ ದರ್ಜೆ ಸಹಾಯಕ | ಕಛೇರಿ ಅಧೀಕ್ಷಕರು | 02 ನೌಕರರು |
| 02 | ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿಸ್ಟ್ | ಸೀನಿಯರ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿಸ್ಟ್ | 01 ನೌಕರರು |
| 03. | ದ್ವಿತೀಯ ದರ್ಜೆ ಸಹಾಯಕ/ ಕ್ಲರ್ಕ್ ಕಂ ಟೈಪಿಸ್ಟ್ / ಸ್ಟೋರ್ ಕ್ಲರ್ಕ್ ಕಂ ಟೈಪಿಸ್ಟ್ | ಪ್ರಥಮ ದರ್ಜೆ ಸಹಾಯಕ | 07 ನೌಕರರು |
| 04 | ಕಿರಿಯ ಪ್ರಯೋಗಶಾಲಾ ತಂತ್ರಜ್ಞ | ಹಿರಿಯ ಪ್ರಯೋಗಶಾಲಾ ತಂತ್ರಜ್ಞ | 05 ನೌಕರರು |
| 05. | ಅಕ್ಷರಸ್ಥ ಸೇವಕ | ದ್ವಿತೀಯ ದರ್ಜೆ ಸಹಾಯಕ | 02 ನೌಕರರು |
| 06. | ಲಿಫ್ಟ್ ಆಟೆಂಡರ್ | ಟೆಲಿಫೋನ್ ಆಪರೇಟರ್ | 01 ನೌಕರರು |
| 07. | ವಾರ್ಡ್ ಆಟೆಂಡರ್ ಹಾಗು ಸಮಾನಂತರ ಹುದ್ದೆಗಳಿಂದ | ಅಕ್ಷರಸ್ಥ ಸೇವಕ ಹುದ್ದೆ | 06 ನೌಕರರು |

ಸಂಸ್ಥೆಯ ಗ್ರೂಪ್-ಎ ಬೋಧಕ ವೃಂದದ ಹುದ್ದೆಗಳಿಗೆ ಮುಂಬಡ್ತಿ ಪರಿಶೀಲನಾ ಸಮಿತಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಅಧ್ಯಕ್ಷರಾಗಿರುತ್ತಾರೆ. ಗ್ರೂಪ್-ಎ ಬೋಧಕ ವೃಂದದ ಹುದ್ದೆಗಳಿಗೆ ಮುಂಬಡ್ತಿ ನೀಡುವಾಗ ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಭಾರತೀಯ ವೈದ್ಯಕೀಯ ಪರಿಷತ್ತಿನ ಮಾರ್ಗಸೂಚಿಗಳ ಪ್ರಕಾರ ಮುಂಬಡ್ತಿ ನೀಡಲು ಕ್ರಮವಹಿಸಲಾಗುತ್ತದೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಹಾಗೂ ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ಕಲ್ಬುರ್ಗಿ ಇಲ್ಲಿನ ಗ್ರೂಪ್-ಎ ಬೋಧಕ ವೃಂದದ ಸಹಾಯಕ ಪ್ರಾಧ್ಯಾಪಕ ಮತ್ತು ಸಹ ಪ್ರಾಧ್ಯಾಪಕ ವೃಂದದಲ್ಲಿ 05 ವರ್ಷಗಳ ಮೇಲ್ಪಟ್ಟು ಸೇವೆ ಸಲ್ಲಿಸಿರುವ ವೈದ್ಯಾಧಿಕಾರಿಗಳಿಗೆ ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ

ವೃಂದದ 25 ಹುದ್ದೆಗಳಿಗೆ ಉನ್ನತೀಕರಣ ಮಾಡಲು, ದಿನಾಂಕ; 16.06.2021ರ ಸರ್ಕಾರದ ಆದೇಶ ಸಂಖ್ಯೆ ಎಂಇಡಿ 37 ಕೆಯುಎಂ 2020ರ ಸರ್ಕಾರದ ಆದೇಶದಲ್ಲಿ ಸೂಚಿಸಿರುತ್ತದೆ. ಸಂಸ್ಥೆಯಲ್ಲಿ ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ ವೃಂದದಲ್ಲಿ ಖಾಲಿ ಇರುವ ಸುಮಾರು 10 ಹುದ್ದೆಗಳಿಗೆ ಮುಂಬಡ್ತಿ ನೀಡಲು ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯ ಮುಂದೆ ಪ್ರಸ್ತಾವನೆಯನ್ನು ತರಲು ಕ್ರಮವಹಿಸಲಾಗುತ್ತಿದೆ.

ಸಂಸ್ಥೆಯ ಗ್ರೂಪ್-ಬಿ ವೃಂದದ ಹುದ್ದೆಗಳಿಗೆ ದಿನಾಂಕ: 17.08.2021ರಂದು ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯು ಜರುಗಿತ್ತು. ಗ್ರೂಪ್-ಬಿ ವೃಂದದ ಹುದ್ದೆಗಳಿಗೆ ಮುಂಬಡ್ತಿ ನೀಡಲು 07 ಅಭ್ಯರ್ಥಿಗಳನ್ನು ಪರಿಗಣಿಸಲಾಗಿದೆ.

ಮೇಲ್ಕಂಡ ಮಾಹಿತಿ ಹಿನ್ನೆಲೆಯಲ್ಲಿ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದಲ್ಲಿ 02 ವರ್ಷಗಳ ಅವಧಿಯಲ್ಲಿ ಸುಮಾರು 125 ಅಧಿಕಾರಿ / ನೌಕರರುಗಳಿಗೆ ಮುಂಬಡ್ತಿ ನೀಡಲಾಗಿರುತ್ತದೆ.

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ:ಎಂಇಡಿ 207 ಕೆಯುಎಂ 2021